ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 147

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಮಂಗಳವಾರ: 19–05–2026

# ಮುಷ್ಕರಕ್ಕಿಳಿದರೆ ವೇತನ ಇಲ್ಲ

**ಬೆಂಗಳೂರು, ಮೇ.18–** ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ ತಿಂಗಳ 20 ರಿಂದ ನಡೆಸಲಿರುವ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೆಲಸ ಮಾಡದಿದ್ದರೆ ವೇತನವಿಲ್ಲ ಎಂದು ನೌಕರರಿಗೆ ಖಡಕ್ ಎಚ್ಚರಿಕೆ ನೀಡಿದೆ.

ಮುಷ್ಕರದಲ್ಲಿ ಭಾಗವಹಿಸುವ ನೌಕರರ ವಿರುದ್ಧ "ಕೆಲಸ ಮಾಡದಿದ್ದಾಗ ವೇತನವಿಲ್ಲ" ತತ್ವದಡಿ ಕಠಿಣ ಶಿಸ್ತು ಕ್ರಮ ಜರುಗಿಸಲಾಗುವುದು ಜೊತೆಗೆ ಮುಷ್ಕರದಲ್ಲಿ ಪಾಲ್ಗೊಂಡರೆ ವೇತನ ಕಡಿತ ಮಾಡುವುದಾಗಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅಧಿಕೃತ ಆದೇಶ ಹೊರಡಿಸಿದ್ದಾರೆ.

ಸಾರ್ವಜನಿಕರಿಗೆ ಸಮರ್ಪಕ ಸಾರಿಗೆ ಒದಗಿಸುವುದು ನಿಗಮದ ಜವಾಬ್ದಾರಿಯಾಗಿದೆ. ಸರ್ಕಾರವು ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸೇವೆಯನ್ನು ಅಗತ್ಯ ಸೇವೆಗಳ ಕಾಯ್ದೆ ಅಡಿ ಎಸ್ಮಾ ತಂದಿರುವುದರಿಂದ ನೌಕರರು ಮುಷ್ಕರ ಹೂಡುವಂತಿಲ್ಲ ಹಾಗೂ ಯಾರೂ ಇದಕ್ಕೆ ಪ್ರಚೋದನೆ ನೀಡುವಂತಿಲ್ಲ ಎಂದು ಸೂಚನೆ ನೀಡಿದ್ದಾರೆ.

ಸರ್ಕಾರ ಸಾರಿಗೆ ನಿಗಮಗಳ ಸೇವೆಯನ್ನು"ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆ" ಎಂದು ಘೋಷಿಸಿದೆ. ಸದ್ಯ




ಮುಷ್ಕರದ ನೋಟಿಸ್ ಕುರಿತಾದ ವಿವಾದ ಕಾರ್ಮಿಕ ಆಯುಕ್ತರ ಮುಂದೆ ರಾಜೀ ಸಂಧಾನದಲ್ಲಿರುವುದರಿಂದ, ನಿಯಮಗಳ ಪ್ರಕಾರ ಸಂಧಾನ ಪ್ರಕ್ರಿಯೆ ನಡೆಯುತ್ತಿರುವಾಗ ನೌಕರರು ಮುಷ್ಕರ ಮಾಡುವಂತಿಲ್ಲ ಎಂದು ತಿಳಿಸಿದ್ದಾರೆ.

ಮೇ 20 ರಿಂದ ಸಾರ್ವಜನಿಕ ಪ್ರಯಾಣಿಕರ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ತಡೆಯಲು ನಿಗಮವು ಎಲ್ಲಾ ವಿಭಾಗೀಯ ಅಧಿಕಾರಿಗಳಿಗೆ ಈ ಕೆಳಗಿನ ನಿರ್ದೇಶನಗಳನ್ನು ನೀಡಿದೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

**ರಜೆಗಳ ರದ್ದು:** ಮೇ 20 ರಿಂದ ಜಾರಿಗೆ ಬರುವಂತೆ ಅತ್ಯಂತ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ನೌಕರರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದು. ಅವಶ್ಯಕತೆ ಬಿದ್ದಲ್ಲಿ ವಾರದ ರಜೆಯನ್ನೂ ರದ್ದುಗೊಳಿಸಿ ಕರ್ತವ್ಯಕ್ಕೆ ನಿಯೋಜಿಸಬಹುದು ಎಂದು ಹೇಳಿದ್ದಾರೆ.

ವೇತನ ಕಡಿತ ಮತ್ತು ಶಿಸ್ತು ಕ್ರಮ: ಮುಷ್ಕರದ ಅವಧಿಯಲ್ಲಿ ಕೆಲಸಕ್ಕೆ ಗೈರುಹಾಜರಾಗುವ ನೌಕರರ ದಿನವಹಿ, ಘಟಕವಾರು ಪಟ್ಟಿಯನ್ನು ಸಿದ್ಧಪಡಿಸಿ, ಅಂದಿನ ವೇತನವನ್ನು ಕಡಿತಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠದ ಆದೇಶದ ಅನ್ವಯ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರುಹಾಜರಾಗುವ ನೌಕರರ ವೇತನ ಕಡಿತದ ಜೊತೆಗೆ ಅವರ ವಿರುದ್ಧ ಇಲಾಖಾ ಶಿಸ್ತಿನ ಕ್ರಮ ಜರುಗಿಸಲು ಆಡಳಿತ ಮಂಡಳಿಗೆ ಪೂರ್ಣ ಅಧಿಕಾರವಿರುತ್ತದೆ.

ರಾಜ್ಯದ ಜನಸಾಮಾನ್ಯರ ಹಿತದೃಷ್ಟಿಯಿಂದ ನೌಕರರು ಯಾವುದೇ ಕಾರಣಕ್ಕೂ ಮುಷ್ಕರದಲ್ಲಿ ಭಾಗವಹಿಸದೆ, ತಮ್ಮ ದೈನಂದಿನ ಕರ್ತವ್ಯಕ್ಕೆ ಹಾಜರಾಗಬೇಕಾಗಿ ಕೆಎಸ್‌ಆರ್‌ಟಿಸಿ ಆಡಳಿತ ಮಂಡಳಿ ತಿಳಿಸಿದೆ.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ 2ನೇಪುಟಕ್ಕೆ

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನೇಮಕಾತಿಯಲ್ಲಿ ಅವ್ಯವಹಾರ ತನಿಖೆ ನಡೆಸಿ: ಕೆ.ಶಾಂತಪ್ಪ



ಧೈರ್ಯದ ದಾರಿ

**ಮಾನ್ವಿ :** ಪಟ್ಟಣದ ಪತ್ರಿಕಾ ಭವನದಲ್ಲಿ ಮಾಜಿ ತಾಲೂಕು ಪಂಚಾಯಿತಿ ಸದಸ್ಯರಾದ ಕೆ.ಶಾಂತಪ್ಪ ಮಾತನಾಡಿ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ನೇಮಕಾತಿಯಲ್ಲಿ ಕೆಲವು ಅಭ್ಯರ್ಥಿಗಳು ಅಧಿಕಾರಿಗಳ ಕುಮ್ಮಕ್ಕಿನಿಂದ ನಕಲಿ ದಾಖಲಾತಿಗಳನ್ನು ಸಲ್ಲಿಸಿ ನೇಮಕ ಗೊಂಡಿರುವುದು ಕಂಡುಬರುತ್ತಿದ್ದು ಜಿಲ್ಲಾಧಿಕಾರಿಗಳು ಕೂಡಲೇ ನೇಮಕಾತಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ನೈಜ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಹಾಗೂ ಸತ್ಯಶೋಧನ ತಂಡವನ್ನು ರಚಿಸಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಡಿ.ಎಸ್.ಎಸ್. ಜಿಲ್ಲಾಧ್ಯಕ್ಷರಾದ ಅಧ್ಯಕ್ಷರಾದ ಅಬ್ರಾಹಾಂ, ತಾ.ಅಧ್ಯಕ್ಷರಾದ,ಸದಾನಂದ ಜಾಗಿರಪನ್ನೂರು, ದಲಿತ ಛಾಲುವಾದಿ ಸಭಾ ಸದಸ್ಯರಾದ ಹನುಮಂತ ಬೈಲ್ ಮಾರ್ಚಡ್, ಮುಖಂಡರಾದ ವಸಂತಕುಮಾರ ಕೋಟ್ನೆಕಲ್ ಇದ್ದರು.

## ಮಾನ್ವಿ ಪಟ್ಟಣಕ್ಕೆ ಸಮರ್ಪಕ ನೀರು ಪೂರೈಕೆ ಮಾಡುವಲ್ಲಿ ಪುರಸಭೆ ಮುಖ್ಯಾಧಿಕಾರಿಗಳು ವಿಫಲ. :ಗಂಗಾಧರ ನಾಯಕ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಮಾಜಿ ಶಾಸಕ ಗಂಗಾಧರ ನಾಯಕ ಸುದ್ದಿಗಾರರೊಂದಿಗೆ ಮಾತನಾಡಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಹಾಗೂ ತಹಸೀಲ್ದಾರ್ ಸೇರಿದಂತೆ ಜಿಲ್ಲಾಧಿಕಾರಿಗಳಿಗೆ ಮತ್ತು ಪುರಸಭೆ ಆಡಳಿತಾಧಿಕಾರಿಗಳಾಗಿರುವ ಜಿಲ್ಲಾ ಸಹಾಯಕ ಉಪವಿಭಾಗಧಿಕಾರಿಗಳಿಗೆ ಮಾನ್ವಿ ಪಟ್ಟಣದಲ್ಲಿ ಬೇಸಿಗೆಯಲ್ಲಿ ಜನರಿಗೆ ಅಗತ್ಯವಾದ ಶುದ್ದವಾದ ಕುಡಿಯುವ ನೀರನ್ನು ಪೂರೈಸುವಂತೆ ಅನೇಕ ಬಾರಿ ಮನವಿ ಸಲ್ಲಿಸಿದರು ಕೂಡ ಯಾವುದೆ ಕ್ರಮ ಕೈಗೊಳ್ಳದೆ ಇರುವುದು ತಾಲೂಕು ಆಡಳಿತ ಸಂಪುರ್ಣವಾಗಿ ನಿಷ್ಕ್ರಯ ಗೊಂಡಿರುವುದನ್ನು ಸೂಚಿಸುತ್ತದೆ. ಪುರಸಭೆ ಅಧಿಕಾರಿಗಳು ಶುದ್ದ ನೀರು ಪೂರೈಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

ರಾಜ್ಯ ಸರಕಾರ ಪಟ್ಟಣದ 50ಸಾವಿರ ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಟ್ಟಣದ 27 ವಾರ್ಡಗಳಿಗೆ ನಿರಂತರವಾಗಿ ಕುಡಿಯುವ ನೀರನ್ನು ಒದಗಿಸುವುದಕ್ಕೆ 73 ಕೋಟಿ ವೆಚ್ಚದಲ್ಲಿ ಅಮೃತ್ತ –2 ಯೋಜನೆಯನ್ನು ಮಂಜೂರು ಮಾಡಿದರು ಕೂಡ ಕಾಮಾಗಾರಿ ಪ್ರಗತಿಯು ವಿಳಂಬಗತಿಯಲ್ಲಿ ಸಾಗುತ್ತಿದೆ, ರಬ್ಬಣಕಲ್ ಕುಡಿಯು ನೀರಿನ ಕೆರೆಗೆ ನೀರು ಪೂರೈಸುವ ಕಾಲುವೆಗೆ ಅಕ್ಕಪಕ್ಕದ ಮನೆಯವರು ಚರಂಡಿ ನೀರು ಬಿಡುತ್ತಿರುವುದರಿಂದ ಕೆರೆಯ ನೀರು ಕಲುಷಿತಗೊಂಡು ಜನರ ಆರೋಗ್ಯದ ಮೇಲೆ ಪರಿಣಾಮವಾಗುತ್ತಿದೆ. ಪಟ್ಟಣದ ಅಲ್ಪ ಸಂಖ್ಯಾತ ವಾರ್ಡಗಳಲ್ಲಿ ನಿರ್ಮಿಸಲಾದ ಸಿ.ಸಿ.ರಸ್ತೆ ಕಳಪೆ ಗುಣಮಟ್ಟದಿಂದ ಕೂಡಿದು. ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಹಾಗೂ ಉತ್ತಮ ಆಡಳಿತ ನೀಡುವಲ್ಲಿ ವಿಫಲರಾಗಿರುವ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಮುಂದಿನ ದಿನಗಳಲ್ಲಿ ಬಿಜೆಪಿ ಮಾನ್ವಿ ಮಂಡಲ ವತಿಯಿಂದ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.ಮಾಜಿ ಮಾನ್ವಿ ಮಂಡಲಾ ಅಧ್ಯಕ್ಷರಾದ ಜಿ.ಸುಧಾಕರ್ ಮಾತನಾಡಿದರು.

ರಾಯಪ್ಪ ವಕೀಲರು, ಜಗದೀಶ ಓತ್ತೂರು, ಶ್ರೀನಿವಾಸ, ಈರಣ್ಣ, ಶರಣಯ್ಯಸ್ವಾಮಿ, ರವಿಪಾಟೀಲ್, ಉಮಾಪತಿ ನಾಯಕ, ಕುಮಾರಸ್ವಾಮಿ ಮೇದಾ, ಕರೀಂಸಾಬ್,ವೆಂಕಟೇಶಪ್ಪ, ಭಾಸ್ಕರ್ ಜಗ್ಗಿ ಸೇರಿದಂತೆ ಇನ್ನಿತರರು ಇದ್ದರು.

## ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ 94ನೇ ಹುಟ್ಟುಹಬ್ಬ ಆಚರಣೆ: ರೋಗಿಗಳಿಗೆ ಹಣ್ಣು–ಹಾಲು ವಿತರಣೆ

ಧೈರ್ಯದ ದಾರಿ





**ಸಿರವಾರ, ಮೇ 18:** ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ 94ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ, ಸಿರವಾರ ತಾಲ್ಲೂಕು ಜೆಡಿಎಸ್ ಘಟಕದ ಮುಖಂಡರು ಸೋಮವಾರ ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು, ಹಾಲು ಹಾಗೂ ಬ್ರೆಡ್ ವಿತರಣೆ ಮಾಡಿ, ಕೇಕ್ ಕತ್ತರಿಸುವ ಮೂಲಕ ಅರ್ಥಪೂರ್ಣವಾಗಿ ಜನ್ಮದಿನವನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಜಿ. ಲೋಕರೆಡ್ಡಿ ಮಾತನಾಡಿ, "ರಾಷ್ಟ್ರಮಟ್ಟದ ಮುತ್ಸದ್ದಿ ನಾಯಕರಾಗಿರುವ ದೇವೇಗೌಡರು, ದೇಶದ ರೈತರು, ಕಾರ್ಮಿಕರು ಸೇರಿದಂತೆ ದುಡಿಯುವ ಶ್ರಮಿಕ ವರ್ಗದ ಪರವಾಗಿ ಸದಾ ಚಿಂತನೆ ನಡೆಸಿದವರು. ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ನ್ಯಾಯ ಕಲ್ಪಿಸುವ ವಿಶಾಲ ಪರಿಕಲ್ಪನೆ ಹೊಂದಿದ್ದ ಅವರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರು ಸೇರಿದಂತೆ ಪ್ರತಿಯೊಬ್ಬರಿಗೂ ಸೌಲಭ್ಯ ಸಿಗುವಂತೆ ಮೀಸಲಾತಿ ಯೋಜನೆಯನ್ನು ಜಾರಿಗೆ ತಂದ ಮಹಾನ್ ನಾಯಕ," ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ವಿಜಯಲಕ್ಷ್ಮೀ ಹಾಗೂ ತಾಲ್ಲೂಕು ಮಹಾ ಪ್ರಧಾನ ಕಾರ್ಯದರ್ಶಿ ದಾನಪ್ಪ ಅವರು ಮಾತನಾಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಚಂದ್ರಶೇಖರ ಸ್ವಾಮಿ, ಈಶಪ್ಪ ಹೂಗಾರ, ಕಾಶಿನಾಥ ಸರೋದೆ, ಸಿರವಾರ ನಗರ ಘಟಕದ ಅಧ್ಯಕ್ಷ ರಂಜಿತ್ ಕುಮಾರ್, ಎಸ್.ಟಿ. ಘಟಕದ ತಾಲ್ಲೂಕು ಅಧ್ಯಕ್ಷ ಶಿವರಾಜನಾಯಕ, ರಾಮಚಾರಿ, ನಗರ ಯುವ ಘಟಕದ ಅಧ್ಯಕ್ಷ ರಾಮು ಗಿಂಡಿ, ಯುವ ಮುಖಂಡರಾದ ಶಾಂತಪ್ಪ ಪಿತಗಲ್, ಲಕ್ಷ್ಮಣ ಸತ್ತರಸಾಬ್, ಇಸ್ಮಾಯಿಲ್, ಶಿವಕುಮಾರ ಗೌಡ ಲಕ್ಕಂದಿನ್ನಿ, ಹನುಮೇಶ, ಮೌನೇಶ ಆರ್., ಪ್ರತಾಪ್, ಬಸವರಾಜ ಪಿತಗಲ್, ಲಾರಿ ಮಲ್ಲಪ್ಪ, ಮನೋಜ್ ಪಿತಗಲ್ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ದೇವೇಗೌಡರ ಜನ್ಮ ದಿನಾಚರಣೆ ಅಂಗವಾಗಿ ಆಸ್ಪತ್ರೆಗಳಲ್ಲಿ ಹಣ್ಣು ಹಂಪಲು ವಿತರಣೆ ದೇವೇಗೌಡರ ರೈತಪರ ಆಡಳಿತ ದೇಶಕ್ಕೆ ಮಾದರಿ : ರಾಜಾ ರಾಮಚಂದ್ರ ನಾಯಕ

ಧೈರ್ಯದ ದಾರಿ




**ಮಾನ್ವಿ :** ಮಾಜಿ ಪ್ರಧಾನಮಂತ್ರಿಗಳು, ರಾಜ್ಯಸಭಾ ಸದಸ್ಯರು ಹಾಗೂ ಜಾತ್ಯತೀತ ಜನತಾದಳದ ವರಿಷ್ಠ ನಾಯಕರಾದ ಹೆಚ್.ಡಿ.ದೇವೇಗೌಡ ರವರ ಜನ್ಮ ದಿನಾಚರಣೆಯ ಪ್ರಯುಕ್ತ ಮಾನ್ವಿ ತಾಲೂಕು ಜಾತ್ಯತೀತ ಜನತಾದಳ ಪಕ್ಷದ ವತಿಯಿಂದ, ಮಾನ್ವಿ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕರಾದ ರಾಜಾ ವೆಂಕಟಪ್ಪ ನಾಯಕ ದೊರೆ ರವರ ನಿರ್ದೇಶನದ ಮೇರೆಗೆ, ಪಕ್ಷದ ಯುವ ಘಟಕದ ರಾಜ್ಯ ಉಪಾಧ್ಯಕ್ಷರಾದ ರಾಜಾ ರಾಮಚಂದ್ರ ನಾಯಕ ದೊರೆ ರವರ ನೇತೃತ್ವದಲ್ಲಿ ಮಾನ್ವಿ ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿನ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಜಾ ರಾಮಚಂದ್ರ ನಾಯಕ ದೊರೆ ಅವರು, ಎಚ್.ಡಿ. ದೇವೇಗೌಡರು ಕೇವಲ 18 ತಿಂಗಳ ಪ್ರಧಾನಮಂತ್ರಿ ಅವಧಿಯಲ್ಲೇ ದೇಶಕ್ಕೆ ಮಾದರಿಯಾಗುವಂತಹ ಆಡಳಿತ ನೀಡಿದ್ದಾರೆ. ರೈತ ಸಮುದಾಯದ ಮೇಲಿನ ಅವರ ಬದ್ಧತೆಗೆ ಗೌರವ ಸೂಚಕವಾಗಿ ಪಂಜಾಬ್ ರಾಜ್ಯದ ರೈತರು ಭತ್ತದ ಅತ್ಯುತ್ತಮ ತಳಿಯೊಂದಕ್ಕೆ "ದೇವ್ ಗೌಡ" ಎಂದು ಹೆಸರಿಟ್ಟಿರುವುದು ಅವರ ರೈತಪರ ಕಾಳಜಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಮಾಜಿ ಪ್ರಧಾನಿ ದೇವೇಗೌಡರು ದೇವದುರ್ಗ ಹಾಗೂ ಕಲ್ಯಾಣ ಕರ್ನಾಟಕ ಭಾಗಕ್ಕೆ ನೀಡಿರುವ ಅಮೂಲ್ಯ ಕೊಡುಗೆಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಮುಖವಾಗಿದೆ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಯೋಜನೆಗೆ ಚಾಲನೆ ನೀಡಿ ಸಾವಿರಾರು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಬುನಾದಿ ಹಾಕಿದರು. ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳ ಮೂಲಕ ರೈತರ ಬದುಕಿಗೆ ಆಶಾಕಿರಣವಾಗಿದ್ದು, ರಾಯಚೂರು ಭಾಗದ ರಸ್ತೆ, ಕುಡಿಯುವ ನೀರು ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ನಿರಂತರ ಧ್ವನಿ ಎತ್ತಿದ ನಾಯಕರು ದೇವೇಗೌಡರು ಎಂದು ತಿಳಿಸಿದರು. ದೇವದುರ್ಗ ಭಾಗದ ಜನತೆ ಅವರನ್ನು "ಭಗೀರಥ" ಎಂದು ಕರೆಯುತ್ತಿದ್ದು, ಇತ್ತೀಚೆಗೆ ದೇವದುರ್ಗದಲ್ಲಿ ಅವರ ಪುತ್ಥಳಿಯನ್ನೂ ಅನಾವರಣಗೊಳಿಸಲಾಗಿದೆ. ಇಂತಹ ಇಳಿವಯಸ್ಸಿನಲ್ಲಿಯೂ ಪಕ್ಷ ಸಂಘಟನೆಯಲ್ಲಿ ತೊಡಗಿರುವ ದೇವೇಗೌಡರ ಕಾರ್ಯ ಯುವಕರಿಗೆ ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಿ. ರವಿಕುಮಾರ್ ವಕೀಲರು, ಯಲ್ಲಪ್ಪ ನಾಯಕ ಮುಸ್ಟೂರು ವಕೀಲರು, ಶರಣಪ್ಪ ಗೌಡ ಮದ್ಲಾಪುರ, ಶೌಕತ್ ಅಲಿ, ಬಾಷಾ ಸಾಬ್, ಶರಣಪ್ಪ ಮೇಧಾ, ಸುಭಾನ್ ಬೇಗ್, ಬಸವರಾಜ ಸ್ವಾಮಿ, ವಿಜಯ್ ನಾಯಕ ಕೊಟ್ನೆಕಲ್, ಕೆ. ಸಾಜಿದ್ ಪಾಷಾ, ಮ್ಯಾಕಲ್ ಮೌನೇಶ್ ನಾಯಕ, ಯಲ್ಲಪ್ಪ ನಾಯಕ, ಶಿವರಾಮ್ ರೆಡ್ಡಿ ಹೊಸೂರು, ಸಂಪತ್ ಕುಮಾರ್, ವೀರೇಶ್ ವಿಶ್ವಕರ್ಮ ಸೇರಿದಂತೆ ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು, ಪಕ್ಷದ ಮುಖಂಡರು ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

## ಬುಡಕಟ್ಟು ಸಮುದಾಯವನ್ನು ಮುಖ್ಯ ವಾಹಿನಿಗೆ ತರುವ ಕಾರ್ಯವಾಗಲಿ: ಎಡಿಸಿ ಶಿವಾನಂದ

ಧೈರ್ಯದ ದಾರಿ



**ರಾಯಚೂರು ಮೇ.18:** ಸರ್ಕಾರದ ಯೋಜನೆಗಳನ್ನು ಬುಡಕಟ್ಟು ಸಮುದಾಯದ ಅರ್ಹ ಫಲಾನುಭವಿಗಳ ಮನೆ ಮನೆಗೆ ತಲುಪಿಸುವ ಮೂಲಕ ಅವರನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಮುಖ್ಯ ವಾಹಿನಿಗೆ ತರುವ ಕಾರ್ಯ ಆಗಬೇಕೆಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಮೇ.18ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ರಾಯಚೂರು ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನ ಕಾರ್ಯಕ್ರಮದಡಿ ಜನ್ ಭಾಗೀದಾರ ಸಬ್ಸೆ ದೂರ, ಸಬ್ಸೆ ಪೆಹ್ಲೆ ಅಭಿಯಾನ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಭಿಯಾನದಲ್ಲಿ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಆಯುಷ್ಮಾನ್ ಭಾರತ ಕಾರ್ಡ್ , ಜಾತಿ ಪ್ರಮಾಣ ಪತ್ರ, ಪಿಎಂ ಕಿಸಾನ್ ಕ್ರೆಡಿಟ್ ಕಾರ್ಡ್, ಜನಧನ್ ಬ್ಯಾಂಕ್ ಖಾತೆ, ಸಾಮಾಜಿಕ ಭದ್ರತಾ ಯೋಜನೆಗಳಾದ ವೃದ್ಧಾಪ್ಯ ಪಿಂಚಣಿ, ವಿಧವಾ ಪಿಂಚಣಿ, ದಿವ್ಯಾಂಗ ಪಿಂಚಣಿ ಹಾಗೂ ಉದ್ಯೋಗ ಮತ್ತು ಜೀವನೋಪಾಯ ಯೋಜನೆಗಳಾದ ಪಿಎಂ ವಿಶ್ವಕರ್ಮ, ಮುದ್ರಾ ಸಾಲಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡದರು.

ಗ್ರಾಮ ಮಟ್ಟದಲ್ಲಿ ಫಲಾನುಭವಿಗಳಿಗೆ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮಗಳನ್ನು ಆಯೋಜಿಸುವುದು. ಆದಿಕರ್ಮಯೋಗಿ ಹಾಗೂ ಎನ್.ಜಿ.ಓ.ಗಳ ಮೂಲಕ ಗ್ರಾಮಗಳಲ್ಲಿ ಟ್ರಾನ್ಸೆಕ್ಟ್ ವಾಕ್ ನಡೆಸಬೇಕು. ಅವರ ಅಹವಾಲು ಸ್ವೀಕಾರ ಹಾಗೂ ತ್ವರಿತವಾಗಿ ಪರಿಹಾರ ಕೈಗೊಳ್ಳಬೇಕು. ಈ ಕುರಿತು ಪ್ರಗತಿ ವರದಿ ಸಿದ್ಧಪಡಿಸಿ, ಅದರಂತೆ ಮುಂದಿನ ಕ್ರಮ ಕೈಗೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಸಿಡಾಕ್ ಜಂಟಿ ನಿರ್ದೇಶಕ ಜಿ.ಯು.ಹುಡೇದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಿವಮಾನ್ಯಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಶರಣಮ್ಮ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

ಮೊದಲನೇ ಪುಟದಿಂದ

# ಮುಷ್ಕರಕ್ಕಿಳಿದರೆ ವೇತನ ಇಲ್ಲ

ಇದೇ 20 ರಿಂದ ಸಾರಿಗೆ ನೌಕರರ ಮುಷ್ಕರ ಹಿನ್ನೆಲೆ ನೌಕರರಿಗೆ .ಖಡಕ್ ಎಚ್ಚರಿಕೆ ನೀಡಿದ ಸಾರಿಗೆ ಸಂಸ್ಥೆ ಕೆಲಸ ಮಾಡದಿದ್ದಾಗ ವೇತನವಿಲ್ಲ ಖಡಕ್ ಸಂದೇಶ ರವಾನಿಸಿದ ಸರ್ಕಾರ ಮುಷ್ಕರದಲ್ಲಿ ಪಾಲ್ಗೊಂಡರೆ ವೇತನ ಕಡಿತದ ಎಚ್ಚರಿಕೆ
ನ್ಯಾಯಾಲಯದ ಆದೇಶದ ಅನ್ವಯ ಕ್ರಮ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ನೌಕರರಿಗೆ ಯಾವುದೇ ರೀತಿಯ ರಜೆ ಮಂಜೂರು ರದ್ದು ಸರ್ಕಾರ ಸಾರಿಗೆ ನಿಗಮಗಳ ಸೇವೆಯನ್ನು"ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆ ಎಂದು ಘೋಷಣೆ

# ಮೇ.20ರಂದು ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ

**ರಾಯಚೂರು ಮೇ.18**: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿ ಕಲ್ಮಲಾ ವಿದ್ಯುತ್ ಉಪ-ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ.20ರ ಬೆಳಿಗ್ಗೆ 08 ಗಂಟೆಯಿಂದ ಸಾಯಂಕಾಲ 05 ಗಂಟೆವರೆಗೆ ಕಲ್ಮಲಾ ಉಪ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.
ಅಂದು ಬೆಳಿಗ್ಗೆ 8ರಿಂದ ಕಲ್ಮಲಾ, ಮುರಾಂಪುರ, ಸುಲ್ತಾನಪುರ, ಜಾಗೀರವೆಂಕಟಪುರ, ಮಂಚ್ಲಾಪುರ, ಜೇಗರಕಲ್, ರಘುನಾಥನಹಳ್ಳಿ, ವಿಜಯನಗರ ಕ್ಯಾಪ್, ಮಾರೆಮ್ಮಕ್ಯಾಪ್, ಹುಣಿಸಿಹಾಳಹುಡ, ಕಸ್ಬೆಕ್ಯಾಂಪ್, ಸೀತಾನಗರ ನಗರ ಕ್ಯಾಂಪ್, ಹೊಸ್ಪೇಟ, ಮರ್ಚೆಡ್, ಗೋನಾಳ, ಪತ್ತೇಪುರ, 7 ಮೇಲ್ ಇಂಡಸ್ಟ್ರೀಯಲ್ ಏರಿಯಾ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚೀಕಲಪರ್ವಿ ಗ್ರಾಮದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ

ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ಚೀಕಲಪರ್ವಿ ಗ್ರಾಮದಲ್ಲಿನ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದ 7 ನೇ ವಾರ್ಷಿಕೋತ್ಸವ ಅಂಗವಾಗಿ ಐತಿಹಾಸಿಕ ಸ್ವಯಂಭು ಶ್ರೀ ತಿಮ್ಮಪ್ಪ ಸ್ವಾಮಿ ಸನ್ನಿದಾನದಲ್ಲಿ ರವಿವಾರ ಬೆಳಿಗ್ಗೆ ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಲೋಕ ಕಲ್ಯಾಣಾರ್ಥವಾಗಿ ನಡೆದ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮ ಅಂಗವಾಗಿ ಶ್ರೀ ಶ್ರೀನಿವಾಸ ಮೂಲ ವಿಗ್ರಹಕ್ಕೆ ಹಾಗೂ ಸ್ವಯಂಭು ಶ್ರೀನಿವಾಸ ಮೂರ್ತಿಗೆ ವಿಶೇಷ ಅಭಿಷೇಕ ಹಾಗೂ ಅಲಂಕಾರ ನೆರವೇರಿಸಲಾಯಿತು.
ತಿರುಪತಿಯಿಂದ ತಂದಿರುವ ಶ್ರೀನಿವಾಸ ಸಮೇತ ಶ್ರೀದೇವಿ, ಭೂದೇವಿ ಪಂಚಲೋಹದ ಉತ್ಸವ ಮೂರ್ತಿಗಳಿಗೆ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀನಿವಾಸ್ ಪೂಜಾರ್ ವಿಶೇಷ ಅಭಿಷೇಕ ನೆರವೇರಿಸಿ ಶಾಸ್ತ್ರೋಕ್ತವಾಗಿ ಶ್ರೀನಿವಾಸ ಕಲ್ಯಾಣೋತ್ಸವ ನೆರವೇರಿಸಿದರು.
ದೇವಸ್ಥಾನದ ಅರ್ಚಕರಾದ ಗಿರಿಧರಪೂಜಾರ್, ಓಬಳೇಶ್ವರ್‌ಪೂಜಾರ್,ಶ್ರೀಕಾಂತಸ್ವಾಮಿ,ಚಿರಂಜೀವಿ ಆಚಾರ್ಯ , ರಮೇಶ್‌ಪೂಜಾರ್ ಪೂಜಾವಿಧಿ ವಿಧಾನಗಳನ್ನು ನಡೆಸಿಕೊಟ್ಟರು.



ಮಾನ್ವಿ ತಾಲೂಕು ನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್. ಮುತ್ತುರಾಜ್ ಶೆಟ್ಟಿ ಸೇರಿದಂತೆ ಗ್ರಾಮದ ಸಾವಿರಾರು ಭಕ್ತರು ಭಾಗವಹಿಸಿದ್ದರು.

# "ಹರಿದ ಸೂರಿನಲ್ಲಿ ಬದುಕುತ್ತಿದ್ದ ರಂಗಮ್ಮರಿಗೆ ಮನೆ"

ಧೈರ್ಯದ ದಾರಿ

**ಮಸ್ಕಿ:** ಮೇಲ್ಚಾವಣಿಯೇ ಇಲ್ಲದೆ ಹರಕು ಮನೆಯಲ್ಲಿ ಬದುಕು ಸಾಗಿಸುತ್ತಿದ್ದ ತುಗ್ಗಲದಿನ್ನಿ ಗ್ರಾಮದ ರಂಗಮ್ಮ ನಾಯಕ ಅಜ್ಜಿಗೆ ಇದೀಗ ಸಮಾಜ ಸೇವಕ ಭೀಮಣ್ಣ ಕಾಚಾಪುರ್ ಅವರ ಸಹಾಯದಿಂದ ಮನೆ ದೊರೆತಿದೆ. ಹಲವು ವರ್ಷಗಳಿಂದ ಕಷ್ಟದಲ್ಲಿ ಜೀವನ ನಡೆಸುತ್ತಿದ್ದ ರಂಗಮ್ಮಳಿಗೆ ನಾಲ್ಕು ಗೋಡೆ ಹಾಗೂ ಮೇಲ್ಚಾವಣಿಯೊಂದಿಗೆ ಮನೆ ನಿರ್ಮಿಸಿ ಕೊಟ್ಟಿರುವುದು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಗಿದೆ.

ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಹಾಲಾಪುರ ಗ್ರಾಪಂ ವ್ಯಾಪ್ತಿಯ ತುಗ್ಗಲದಿನ್ನಿ ಗ್ರಾಮದಲ್ಲಿ ಸ್ಮಶಾನದ ಸರಕಾರಿ ಜಾಗದಲ್ಲಿ ರಂಗಮ್ಮ ಅಜ್ಜಿ ಸುಮಾರು 30 ವರ್ಷಗಳಿಂದ ಆಸರೆ ಇಲ್ಲದೆ ಬದುಕು ಸಾಗಿಸುತ್ತಿದ್ದರು. ಮೇಲ್ಚಾವಣಿಯಿಲ್ಲದೆ ಆಕಾಶವೇ ಸೂರಾಗಿ ಕಚ್ಚಾ ಮನೆಯಲ್ಲಿ ವಾಸವಾಗಿದ್ದ ಅವರ ಸ್ಥಿತಿ ಕುರಿತು ಸ್ಪಂದಿಸಿದ ಸಮಾಜಸೇವಕ ಹಾಗೂ ನಟ ಭೀಮಣ್ಣ ಕಾಚಾಪುರ್ ತಮ್ಮ ಸ್ವಂತ ಹಣದಲ್ಲಿ ಮನೆ ನಿರ್ಮಿಸಿ ಗೃಹಪ್ರವೇಶ ನೆರವೇರಿಸಿದ್ದು, ಗ್ರಾಮಸ್ಥರು ಮತ್ತು ಸಮಾಜಸೇವಕರು ಅವರನ್ನು ಸನ್ಮಾನಿಸಿದ್ದಾರೆ.



ಗ್ಯಾರಂಟಿ ಕೊಟ್ಟು ನುಡಿದಂತೆ ನಡೆದಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುವ ಆಕ್ರಮ ವಾಸಿಗಳಿಗೆ ಐಷಾರಾಮಿ ಮನೆ ಕೊಡುವ ಸರ್ಕಾರ ಹಾಗೂ ಹತ್ತಾರು ವಸತಿ ಯೋಜನೆ ಇದ್ದರೂ ಇಂತಹ ಬಡವರಿಗೆ ಒಂದು ಸಣ್ಣ ಸೂರು ಒದಗಿಸಲು ಆಗದ ಶಾಸಕರಿಗೆ ನಾಚಿಕೆ ಆಗಬೇಕು ಇಂತಹ ನಿಜವಾದ ಕಳಕಳಿಯ ಸಮಾಜ ಸೇವಕರನ್ನು ಜನತೆ ಆಯ್ಕೆ ಮಾಡಬೇಕು.
**-: ಶರಬಣ್ಣ ಕುಂಬಾರ ಉಟಕನೂರು ಹವ್ಯಾಸಿ ಪತ್ರಕರ್ತ**

# ಕ್ರೀಡಾಂಗಣ ಕಾಮಗಾರಿ ಕಳಪೆ: ಶ್ರವಣಕುಮಾರ ನಾಯಕ ಆಕ್ರೋಶ

**ಜೇವರ್ಗಿ,ಮೇ.18**-ಪಟ್ಟಣದ ಕ್ರೀಡಾಂಗಣ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದ ಬಗ್ಗೆ ದೂರು ನೀಡಿದರು ಕೂಡ ಯಾವುದೇ ಅಧಿಕಾರಿಗಳು ಕಳಪೆ ಕಾಮಗಾರಿ ವಿರುದ್ಧ ಕ್ರಮಕೈಗೊಂಡಿಲ್ಲ. ಕ್ರೀಡಾಂಗಣ ಕಾಮಗಾರಿಗೆ ಸುಮಾರು 5 ಕೋಟಿಗೂ ಹೆಚ್ಚು ಅನುದಾನ ಖರ್ಚು ಮಾಡಲಾಗಿದೆ, ಆದರೆ ಕಾಮಗಾರಿ ಸಂಪೂರ್ಣವಾಗಿ ಕಳಪೆ ಮಟ್ಟದಿಂದ ಕೂಡಿದ ಕಾರಣ ಹಂತ ಹಂತವಾಗಿ ಕುಸಿದು ಕಟ್ಟಡ ನೆಲಸಮವಾಗಿದೆ ಇದಕ್ಕೆ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ನೇರ ಹೊಣೆಗಾರರು ಎಂದು ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯಕ್ಷ ಶ್ರವಣಕುಮಾರ ಡಿ.ನಾಯಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.
ಕಳಪೆ ಕಾಮಗಾರಿ ವಿರುದ್ಧ 2018ರಲ್ಲಿ ದೂರಿ ನೀಡಿದ ಬಗ್ಗೆ ತನಿಖೆ ಮಾಡಿ ತಾಂತ್ರಿಕ ಅಧಿಕಾರಿಗಳು ಕಳಪೆ ಮಟ್ಟದಿಂದ ಕಾಮಗಾರಿ ಮಾಡಿದ ಬಗ್ಗೆ ವರದಿ ನೀಡಿದ ಹಿನ್ನೆಲೆಯಲ್ಲಿ ಸದರಿ ಕಟ್ಟಡದ ಕಾಮಗಾರಿ ಸ್ವಂತ ಹಣದಿಂದ ಕಾಮಗಾರಿ



ಮಾಡಲು ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿಗಳು ಆದೇಶ ಮಾಡಿದ್ದಾರೆ. ಕಳಪೆ ಮಟ್ಟದ ಕಾಮಗಾರಿ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲಾಗಿದೆ. ಕ್ರೀಡಾಂಗಣ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದ ಬಗ್ಗೆ ನಿರಂತರವಾದ ಹೋರಾಟ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

# "ಪೊಲೀಸರ ವಿರುದ್ಧ ಪತ್ರಕರ್ತರ ತಂಡಕ್ಕೆ ಭರ್ಜರಿ ಜಯ"



ಧೈರ್ಯದ ದಾರಿ

**ರಾಯಚೂರು:** ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಪೊಲೀಸರು ಮತ್ತು ಪತ್ರಕರ್ತರ ನಡುವೆ ರವಿವಾರ ನಡೆದ ಸೌಹಾರ್ದ ಕ್ರಿಕೆಟ್ ಪಂದ್ಯದಲ್ಲಿ ಪತ್ರಕರ್ತರ ತಂಡ ಒಂಬತ್ತು ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಟಾಸ್ ಗೆದ್ದ ಪತ್ರಕರ್ತರ ತಂಡದ ನಾಯಕ ಸಿದ್ಧಯ್ಯ ಸ್ವಾಮಿ ಮೊದಲಿಗೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಕ್ಷುಗಿರಿ ಬ್ಯಾಟಿಂಗ್ ಮಾಡುವ ಮೂಲಕ ಪಂದ್ಯಕ್ಕೆ ಚಾಲನೆ ನೀಡಿದರು.

ಮೊದಲು ಬ್ಯಾಟಿಂಗ್ ಮಾಡಿದ ಪೊಲೀಸರ ತಂಡ 10 ಓವರ್‌ಗಳಲ್ಲಿ 69 ರನ್ ಗಳಿಸಿತು. ಪತ್ರಕರ್ತರ ತಂಡದ ಆಕ್ರಮಣಕಾರಿ ಬೌಲಿಂಗ್ ದಾಳಿಗೆ ಪೊಲೀಸ್ ತಂಡದ ಆಟಗಾರರು ಹೆಚ್ಚು ಕಾಲ ಕ್ರೀಸ್‌ನಲ್ಲಿ ಉಳಿಯಲಿಲ್ಲ. ಅಣ್ಣಪ್ಪ ಮೇಟಿ, ಲಕ್ಷ್ಮಣ, ಶ್ರೀಕಾಂತ ಹಾಗೂ ಭೀಮೇಶ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದರು. ಉತ್ತಮ ಕ್ಷೇತ್ರ ರಕ್ಷಣೆಯ ಮೂಲಕ ಪತ್ರಕರ್ತರ ತಂಡ ಎದುರಾಳಿಗಳಿಗೆ ಹೆಚ್ಚಿನ ರನ್‌ಗಳನ್ನು ಸೇರಿಸಲು ಅವಕಾಶ ನೀಡಲಿಲ್ಲ. ಎಸ್‌ಪಿ ಅರುಣಾಂಕುಗಿರಿ 19 ರನ್ ಗಳಿಸಿ ನಾಟೌಟ್ ಆಗಿ ಉಳಿದರು.
ನಂತರ ಬ್ಯಾಟಿಂಗ್ ಆರಂಭಿಸಿದ ಪತ್ರಕರ್ತರ ತಂಡ ಕೇವಲ ಆರು ಓವರ್‌ಗಳಲ್ಲಿ ಗುರಿ ತಲುಪಿ ಸುಲಭವಾಗಿ ಜಯ ಸಾಧಿಸಿತು. ಪೊಲೀಸ್ ತಂಡದ ಬೌಲರ್‌ಗಳು ಪತ್ರಕರ್ತರ ಬ್ಯಾಟರ್‌ಗಳನ್ನು ನಿಯಂತ್ರಿಸಲು ವಿಫಲರಾದರು. ಒಂದು ವಿಕೆಟ್ ನಷ್ಟಕ್ಕೆ 70 ರನ್ ಗಳಿಸಿದ ಪತ್ರಕರ್ತರ ತಂಡ ಗೆಲುವು ತನ್ನದಾಗಿಸಿಕೊಂಡಿತು. ಭೀಮೇಶ ಪೂಜಾರ್, ಶ್ರೀಕಾಂತ್ ಸಾವೂರು ಹಾಗೂ ಮಲ್ಲನಗೌಡ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹರೀಶ, ಕುಮಾರಸ್ವಾಮಿ, ಡಿವೈಎಸ್‌ಪಿಗಳಾದ ಶಾಂತವೀರ, ಪರಮಾನಂದ ಗೋಡ್ಕೆ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್. ಗುರುನಾಥ, ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯಕುಮಾರ್ ಜಾಗಟಗಲ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಪತ್ರಕರ್ತರು ಉಪಸ್ಥಿತರಿದ್ದರು. ಪಂದ್ಯದಲ್ಲಿ ಗೆಲುವು ಸಾಧಿಸಿದ ಪತ್ರಕರ್ತರ ತಂಡಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಕ್ಷುಗಿರಿ ಟ್ರೋಫಿ ವಿತರಿಸಿದರು.

# ಮೌನ ಮಿತ್ರ ಯೋಗ ಸಮಿತಿ ವತಿಯಿಂದ ಉಚಿತ ಯೋಗ ಶಿಬಿರ



ಧೈರ್ಯದ ದಾರಿ

**ಮಾನ್ವಿ :** ಪಟ್ಟಣದಲ್ಲಿ ಮೌನ ಮಿತ್ರ ಯೋಗ ಸಮಿತಿ ವತಿಯಿಂದ ನಡೆದ ಉಚಿತ ಯೋಗ ಶಿಬಿರದ ಸಮರೋಪ ಸಮಾರಂಭ ಕಾರ್ಯಕ್ರಮದಲ್ಲಿ ಡಾ. ವಸಂತ್ ಕುಮಾರ್ ಮಾತನಾಡಿ ಇಂದಿನ ಬದಲಾದ ದಿನಗಳಲ್ಲಿ ಪ್ರತಿಯೊಬ್ಬರು ಜೀವನದಲ್ಲಿ ಒತ್ತಡವನ್ನು ಅನುಭವಿಸುತ್ತಿದ್ದಾರೆ ಅದ್ದರಿಂದ ಪ್ರತಿದಿನ ಸ್ವಲ್ಪ ಸಮಯ ಯೋಗ ಅಭ್ಯಾಸವನ್ನು ಮಾಡುವುದರಿಂದ ದೈಹಿಕ, ಮಾನಸಿಕ ಆರೋಗ್ಯ ಸುಧಾರಿಸುತ್ತದೆ ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ . ಮನಸ್ಸಿಗೆ ಶಾಂತಿ ನೀಡುತ್ತದೆ ಎಂದು ತಿಳಿಸಿದರು.
ಪಟ್ಟಣದ ಬಸವೇಶ್ವರ ಬ್ಯಾಂಕ್ ವ್ಯವಸ್ಥಾಪಕರಾದ ಚಂದ್ರಮೌಳೇಶ್ವರ, ಅಬಕಾರಿ ಇಲಾಖೆಯ ಪೇದೆ ಭಾರತಿ ಮಾತನಮಾಡಿದರು. ಮಾಜಿ ನಿವೃತ್ತ ಯೋಧರಾದ ಮಲ್ಲಯ್ಯ ನಾಯಕ ದೇವಿಪುರ, ಕೃಷ್ಣಮೂರ್ತಿ ಕಲ್ಲೂರ್, ಆಂಜನೇಯ ಜಲ್ಲಿ ನೀರಮಾನ್ವಿ ರವರನ್ನು ಸನ್ಮಾನಿಸಿ ಗೌರವಿಸಲಾಯಿತು.
ಕಾರ್ಯಕ್ರಮದಲ್ಲಿ ಯೋಗ ಗುರು ಮೌನೇಶ್ ಪೋತ್ನಾಳ್, ಶ್ರೀಶೈಲ ಗೌಡ, ಯಲ್ಲಪ್ಪ ವಕೀಲರು, ಲಿಂಗರಾಜ್ ಗಡಿಗೆ, ಬಿ.ವಿರುಪಾಕ್ಷಪ್ಪ ಗ್ರಂಥ ಪಾಲಕರು, ನರಸಪ್ಪ ಟೇಲರ್, ಶಿವಪ್ಪ ಮುಂದಿನಮನೆ, ಶಿವಕುಮಾರ್ ತೋಟದ್, ಮಲ್ಲೇಶ .ಆರ್, ಹನುಮೇಶ್, ಮಲ್ಲಿಕಾರ್ಜುನ ,ಭೀಮಣ್ಣ. ಸಿ.ಡಿ. ವಿಜಯಕುಮಾರ್, ದೇವಿಕಾ. ರಾಜಶೇಖರ್,ವಿರೂಪಾಕ್ಷಗೌಡ ಹರವಿ ಸೇರಿದಂತೆ ಇನ್ನಿತರರು ಇದ್ದರು.

# ಸಚಿವರಿಂದ ಹಿರಿಯ ಪತ್ರಕರ್ತ ಸಿದ್ದರಾಮಯ್ಯಸ್ವಾಮಿ ಕುಟುಂಬಕ್ಕೆ ಸಾಂತ್ವನ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ನಾಲಾ ರಸ್ತೆ ಯಲ್ಲಿರುವ ಹಿರಿಯ ಪತ್ರಕರ್ತ ಸಿದ್ದರಾಮಯ್ಯಸ್ವಾಮಿ ರವರ ನಿವಾಸದಲ್ಲಿ ರಾಜ್ಯ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ರವರು ಕನ್ನಡ ಪ್ರಭ ದಿನಪತ್ರಿಕೆಯ ಮಾಜಿ ವರದಿಗಾರ ಶಿವತೇಜ ಸ್ವಾಮಿ ರವರು ಇತ್ತೀಚಿಗೆ ನಿಧನ ಹೊಂದಿರುವುದಕ್ಕೆ ತಂದೆಯವರಾದ ಸಿದ್ದರಾಮಯ್ಯ ಸ್ವಾಮಿ ಹಾಗೂ ಕುಟುಂಬದವರಿಗೆ ಸಾಂತ್ವನ ತಿಳಿಸಿದರು.
ಶಾಸಕ ಜಿ .ಹಂಪಯ್ಯ ನಾಯಕ್ ಸೇರಿದಂತೆ.
ನಯೋಪ್ರ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ತಾಲೂಕು ಪಂಚ ಗ್ಯಾರಂಟಿಗಳ ಸಮಿತಿ ಅಧ್ಯಕ್ಷರಾದ ಬಿ.ಕೆ.ಅಮರೇಶಪ್ಪ ವಕೀಲರು, ರೌಡೂರು ಮಹಾಂತೇಶ್ ಸ್ವಾಮಿ, ರುದ್ರಪ್ಪ ಅಂಗಡಿ,ಅಮರೇಗೌಡ ಹಂಚಿನಾಳ, ಗುಡದಿನ್ನಿ ಶರಣಯ್ಯ ನಾಯಕ್,ರಾಜ ಸುಭಾಷ್ ಚಂದ್ರ ನಾಯಕ್, ಅಯ್ಯಪ್ಪ ಕವಿತಾಳ,ಸತ್ತರ್ ಬಂಗ್ಲೆವಾಲೆ ಇದ್ದರು.



# ವಿಶ್ವ ರಕ್ತದೊತ್ತಡ ದಿನ 150ಕ್ಕೂ ಹೆಚ್ಚು ಜನರಿಗೆ ಉಚಿತ ಆರೋಗ್ಯ ತಪಾಸಣೆ





ಧೈರ್ಯದ ದಾರಿ

ವಿಶ್ವ ರಕ್ತದೊತ್ತಡ ದಿನ ಅಂಗವಾಗಿ ರಾಯಚೂರು ನಗರದ. ಅಜಾದ್ ನಗರದಲ್ಲಿರುವ ವಿಜಯ ಪಾಲಿ ಕ್ಲಿನಿಕ್ ಮತ್ತು ನರ್ಸಿಂಗ್ ಹೋಮ್ ಇಲ್ಲಿ ಖ್ಯಾತ ಹೃದಯ ರೋಗ ತಜ್ಞ ಡಾ. ಅಜಿತ್ .ವಿ. ಕುಲಕರ್ಣಿ ಅವರ ನೇತೃತ್ವದಲ್ಲಿ ಭಾನುವಾರ ಉಚಿತ ಹೃದಯ ರೋಗ ಹಾಗೂ ಆರೋಗ್ಯ ತಪಣಾ ಶಿಬಿರ ಜರಗಿತು .ಈ ಶಿಬಿರದಲ್ಲಿ ರಾಯಚೂರು ನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಂದ 150ಕ್ಕೂ ಹೆಚ್ಚು ಜನರು ಭಾಗವಹಿಸಿ ಉಚಿತ ಆರೋಗ್ಯ ತಪಾಸಣೆಯು ಸದುಪಯೋಗ ಪಡೆದುಕೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ಖ್ಯಾತ ಹೃದಯ ರೋಗ ತಜ್ಞ ಡಾ. ಅಜಿತ್ ವಿ ಕುಲಕರ್ಣಿ .ರಕ್ತದೊತ್ತಡ ಹಾಗೂ ಹೃದಯ ಸಂಬಂಧಿ ಕಾಯಿಲೆಗಳು ವೇಗವಾಗಿ ಹೆಚ್ಚುತ್ತವೆ ರಕ್ತದ ಒತ್ತಡವನ್ನು ಸೈಲೆಂಟ್ ಕಿಲ್ಲರ್ ಎಂದು ಕರೆಯಲಾಗುತ್ತದೆ. ಏಕೆಂದರೆ ಯಾವುದೇ ಪ್ರಮುಖ ಲಕ್ಷಣಗಳಿಲ್ಲದೆ ಹೃದಯ ಮೂತ್ರಪಿಂಡ ಸೇರದಂತೆ ದೇಹದ ಹಲವು ಅಂಗಾಂಗಗಳಿಗೆ ಹಾನಿ ಉಂಟುಮಾಡುತ್ತದೆ ಎಂದು ತಿಳಿಸಿದರು .ಸಾರ್ವಜನಿಕರು ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಸಮತೋಲನ ಆಹಾರ. ವ್ಯಾಯಾಮ ಹಾಗೂ ಒತ್ತಡ ರಹಿತ ಜೀವನ ಶೈಲಿಯನ್ನು ಅಳವಡಿಸಿಕೊಂಡರೆ ಹೃದಯ ಸಂಬಂಧಿ ಸಮಸ್ಯೆಗಳಿಂದ ಹೊರ ಬರಬಹುದೆಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ ಬಿರಾದಾರ್ ಮಾತನಾಡುತ್ತಾ. ವಿಶೇಷವಾಗಿ ಇಂದು ವಿಶ್ವ ರಕ್ತದೊತ್ತಡ ದಿನದ ಅಂಗವಾಗಿ ಈ ಒಂದು ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜನೆ ಮಾಡಿದ್ದಾರೆ ಇದರ ಲಾಭವನ್ನು ಪ್ರತಿಯೊಬ್ಬ ಹೃದಯ ರೋಗಕ್ಕೆ ಸಂಬಂಧಪಟ್ಟ ಕಾಯಿಲೆ ಇರುವಂತಹ ವ್ಯಕ್ತಿಗಳು ಉಚಿತವಾಗಿ ತಪಾಸಣೆ ಮಾಡಿಸಿಕೊಂಡು ಇದರ ಲಾಭ ಪಡೆದುಕೊಳ್ಳಬೇಕು, ಡಾ. ಅಜಿತ್ ಕುಲಕರ್ಣಿ ಅವರು ಕ್ರಿಯಾಶೀಲ ಹೃದಯವಂತ ವೈದ್ಯರಾಗಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಇ.ಸಿ.ಜಿ ರಕ್ತದೊತ್ತಡ ತಪಾಸಣೆ .ರಕ್ತದ ಸಕ್ಕರೆ ಪರೀಕ್ಷೆ ಲಿಪಿಡ್ ಪ್ರೊಫೈಲ್ ಎಚ್. ಡಿ.1 ಸೇರಿದಂತೆ ವಿವಿಧ ಹೃದಯ ಸಂಬಂಧಿ ಪರೀಕ್ಷೆಗಳನ್ನು ಉಚಿತವಾಗಿ ನಡೆಸಲಾಯಿತು. ಜೊತೆಗೆ ರೋಗಿಗಳಿಗೆ ಉಚಿತ ವೈದ್ಯಕೀಯ ಸಮಾಜ ಚಿಕಿತ್ಸೆ ನೀಡಲಾಯಿತು. ಈ ಸಂದರ್ಭದಲ್ಲಿ ಆಸ್ಪತ್ರೆ ವೈದ್ಯರು ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು

# ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಇತ್ತೀಚಿಗೆ ಅಗಲಿದ ಪತ್ರಕರ್ತರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಇತ್ತೀಚಿಗೆ ನಿಧನರಾದ ಕನ್ನಡ ಪ್ರಭ ದಿನಪತ್ರಿಕೆಯ ಮಾಜಿ ವರದಿಗಾರ ಶಿವತೇಜಸ್ವಾಮಿ ಹಾಗೂ ಹಟ್ಟಿ ಚಿನ್ನದ ಗಣಿಯಲ್ಲಿ ವಿಜಯಕರ್ನಾಟಕ ದಿನಪತ್ರಿಕೆಯ ವರದಿಗಾರ ಸೋಮ್ಮಣ್ಣ ಗುರಿಕಾರ ರವರಿಗೆ ಮೌನಚಾರಣೆ ಮೂಲಕ ಸಂತಾಪ ಸಲ್ಲಿಸಲಾಯಿತು. ಕಾರ್ಯನಿರತ ಪತ್ರಕರ್ತರ ಸಂಘದ ತಾ.ಅಧ್ಯಕ್ಷರಾದ ಆಶೋಕ ತಡಕಲ್ ಹಾಗೂ ಹಿರಿಯ ವರದಿಗಾರರಾದ




ಪಿ.ಪರಮೇಶ, ಬಸವರಾಜ ಭೋಗಾವತಿ, ಶರಣಬಸವ ನೀರಮಾನ್ವಿ,ಕೃಷ್ಣಮೂರ್ತಿಗುಡಿ, ತಾಯಪ್ಪಬಿ,ಹೋಸೂರು, ಲಕ್ಷ್ಮಣ ಕಪಗಲ್, ಮಾರೆಪ್ಪ ದೊಡ್ಮನಿ, ಆನಂದಸ್ವಾಮಿ, ಗಿರೀಶ್,ರಾಜಶೇಖರ,ಮೈನುದಿನ್,ಹುಸೇನಪ್ಪ ನಂದಿಹಾಳ್, ಮಹಾಂತೇಶ್ ಶೆಟ್ಟಿ, ಬಸವರಾಜ ಕನ್ನಾರಿ,ನಾಗರಾಜ ಮುಸ್ಟೂರು, ಜಿತೇಂದ್ರಸ್ವಾಮಿ,ಶಿವುಸಜ್ಜನ್, ರಾಜ್‌ಶೇಕರ್ ಹೆಳವರ್ ಸೇರಿದಂತೆ ಇನ್ನಿತರರು ಇದ್ದರು.

# ಕಪಗಲ್ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಕರ್ತವ್ಯಕ್ಕೆ ಹಾಜರಾದ ಶಂಕರದೇವಿ ಕುರ್ಡಿ

ಧೈರ್ಯದ ದಾರಿ

**ಮಾನ್ವಿ:**ತಾಲೂಕಿನ ಕಪಗಲ್ ಗ್ರಾಮದ ಉ.ಸ.ಹಿ.ಪ್ರಾ ಶಾಲೆಯಲ್ಲಿ ಮುಂಬಡ್ತಿ ಆಧಾರದ ಮೇಲೆ ಶಂಕರದೇವಿ ಕುರ್ಡಿ ಮುಖ್ಯೋಪಾಧ್ಯಾಯರಾಗಿ ಶಂಕರದೇವಿ ಕುರ್ಡಿ ಅಧಿಕಾರ ವಹಿಸಿಕೊಂಡರು. ಶಂಕರದೇವಿ ಕುರ್ಡಿ ರವರು ಕುರ್ಡಿ ಕ್ರಾಸ್ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಅನೇಕ ವರ್ಷಗಳ ಕಾಲ ಉತ್ತಮವಾಗಿ ಸೇವೆ ಸಲ್ಲಿಸಿ ಮುಖ್ಯೋಪಾಧ್ಯಾಯರಾಗಿ ಮುಂಬಡ್ತಿ ಹೊಂದಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಕುರ್ಡಿ,



ತಾ.ಅಧ್ಯಕ್ಷ ಸಬ್ಜಲಿಸಾಬ್, ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ನರಸಿಂಹ ಸಿ.ಎಂ, ಸರಕಾರಿ ನೌಕರರ ಸಂಘದ ಕಾರ್ಯದರ್ಶಿ ಹಂಪಣ್ಣ ಚಂಡೂರು, ನೌಕರರ ಸಂಘದ ಮಾಜಿ ತಾಲೂಕ ಅಧ್ಯಕ್ಷ ಶಂಕರ್ ಕುರ್ಡಿ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಸಬ್ಜಲಿ, ಶಿಕ್ಷಕರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಕಪಗಲ್ ,ಶಾಲೆಯ ಹಿರಿಯ ಶಿಕ್ಷಕ ಬಸವಲಿಂಗಪ್ಪ, ಅತಿಥಿ ಶಿಕ್ಷಕರಾದ ಶಿವರಾಜ, ತ್ಯಾಗರಾಜ, ರಾಘವೇಂದ್ರ ಚೌಡ್ಕಿ, ಯಶೋಧ, ನಾಗರತ್ನ ಸೇರಿದಂತೆ ಇನ್ನಿತರರಿದ್ದರು.

# ಜೂನ್ ತಿಂಗಳಾಂತ್ಯಕ್ಕೆ ಬಸವಕಲ್ಯಾಣದಲ್ಲಿ ಬಸವಾದಿ ಶರಣರ ಹಿಂದು ಜಾಗೃತಿ ಸಮಾವೇಶ: ಘನಲಿಂಗ ರುದ್ರಮುನಿ ಶಿವಾಚಾರ್ಯರು

**ಬೀದರ್: ಮೇ.18:**ಜೂನ್ ತಿಂಗಳಾಂತ್ಯಕ್ಕೆ ವಿಶ್ವಗುರು ಬಸವಣ್ಣನವರ ಕರ್ಮಭೂಮಿ ಬಸವಕಲ್ಯಾಣದ ಥೇರ್ ಮೈದಾನದಲ್ಲಿ ಕನೇರಿ ಕಾಡಸಿದ್ದೇಶ್ವರ ಮಹಾಸ್ವಾಮಿಜಿ ಅವರ ನೇತೃತ್ವದಲ್ಲಿ ಬಸವಾದಿ ಶಿವಶರಣರ ಹಿಂದು ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ರಾಜೇಶ್ವರ ಶ್ರೀಮಠದ ಪೂಜ್ಯ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಹರಿದು ಹಂಚಿ ಹೋಗುತ್ತಿರುವ ಹಿಂದು ಸಮಾಜವನ್ನು ಒಗ್ಗೂಡಿಸುವುದು ಹಾಗೂ ಅವರ ಮಕ್ಕಳಿಗೆ ಸಂಸ್ಕಾರ ಮತ್ತು ಸಂಸ್ಕೃತಿ ಕಲಿಸುವ ಉದ್ದೇಶದಿಂದ ಈ ಸಮಾವೇಶ ಅತ್ಯಂತ ಸೂಕ್ತವಾಗಿದೆ. ಬೀದರ್ ಜಿಲ್ಲಾ ಮಠಾಧೀಶರ ಒಕ್ಕೂಟ ಈ ಕಾರ್ಯಕ್ರಮ ಆಯೋಜಿಸಲಿದೆ ಎಂದರು.




ಕಾಂಗ್ರೆಸ್ ಮುಖಂಡ ಗುಂಡುರಡ್ಡಿ ಮಾತನಾಡಿ, ಕನೇರಿ ಶ್ರೀಗಳು ಈಗಾಗಲೇ ವಿಜಯಪುರ ಜಿಲ್ಲೆಯ ಬಬಲಾದಿಯಿಂದ ಬಸವಾದಿ ಶರಣರ ಹಿಂದು ಜಾಗೃತಿ ಸಮಾವೇಶ ಅಭಿಯಾನ ಆರಂಭಿಸಿದ್ದು, ಇಂದು ಸೋಮವಾರ ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಈ ಅಭಿಯಾನ ಜರುಗಲಿದೆ. ಬಸವಣ್ಣನವರ ಕರ್ಮಭೂಮಿ ಬಸವಕಲ್ಯಾಣದಲ್ಲಿ ಜೂನ್ ಅಂತ್ಯದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಬಸವಪರ ಸಂಘಟನೆಗಳನ್ನು ಸಹ ಈ ಕಾರ್ಯಕ್ರಮದಲ್ಲಿ ಮುಕ್ತವಾಗಿ ಅವ್ಹಾನಿಸಲಾಗುತ್ತದೆ. ಶ್ರೀಗಳು ಹೇಳಿದಂತೆ ಹಿಂದು ಧರ್ಮಿಯರನ್ನು ಒಂದೆಡೆ ಸೇರಿಸುವ ಒಂದೆ ಒಂದು ಉದ್ದೇಶ ಈ ಕಾರ್ಯಕ್ರಮದ್ದಾಗಿದೆ ಎಂದರು. ಬಸವಕಲ್ಯಾಣ ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಣಿ, ಹಲಬರ್ಗಾ ಹಾಗೂ ಹೈದ್ರಾಬಾದ್‌ನ ಪೂಜ್ಯ ಹಾವಗಿಂಗೇಶ್ವರ ಶಿವಾಚಾರ್ಯರು ಮಾತನಾಡಿದರು. ಹಿರೇನಾಗಾಂವದ ಪೂಜ್ಯ ಜಯಶಾಂತಲಿಂಗ ಮಹಾಸ್ವಾಮಿಗಳು, ಅಷ್ಟಗಿಯ ಪೂಜ್ಯ ನಿಜಲಿಂಗ ಶಿವಾಚಾರ್ಯರು, ಕಲ್ಲೂರುದ ಪೂಜ್ಯ ಮೃತ್ಯುಂಜಯ ಶಿವಾಚಾರ್ಯರು, ಲಾಡಗೇರಿಯ ಪೂಜ್ಯ ಗಂಗಾಧರ ಶಿವಾಚಾರ್ಯರು, ಸಿಂಧನಕೇರಾದ ಪೂಜ್ಯ ಹೊನ್ನಲಿಂಗ ಮಹಾಸ್ವಾಮಿಗಳು, ಯದಲಾಪುರದ ಪೂಜ್ಯ ಶಿವಶಂಕರ ಶಿವಾಚಾರ್ಯರು, ಹುಡಗಿ ವಿರಕ್ತ ಮಠದ ಪೂಜ್ಯ ಚನ್ನಮಲ್ಲ ಸ್ವಾಮಿಗಳು, ಚಾಂಬೋಳದ ಪೂಜ್ಯ ರುದ್ರಮುನಿ ಶಿವಾಚಾರ್ಯರು, ಮಂಠಾಳದ ಪೂಜ್ಯ ಚನ್ನಬಸವ ಮಹಾಸ್ವಾಮಿಗಳು, ಖಟಕ ಚಿಂಚೋಳಿಯ ಬಸವಲಿಂಗ ಶಿವಾಚಾರ್ಯರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಗುಲಬರ್ಗಾ ವಿವಿ ಹೊರಗುತ್ತಿಗೆ ನೌಕರರಿಗೆ ನ್ಯಾಯ ಒದಗಿಸಲು ಶಿವ ಅಷ್ಟಗಿ ಅಗ್ರಹ

**ಕಲಬುರಗಿ :ಮೇ.18:**ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಮತ್ತೆ ಮುಂದುವರಿಸಿ ನ್ಯಾಯ ಒದಗಿಸಬೇಕೆಂದು ಬಿಜೆಪಿ ಯುವ ಮೋರ್ಚಾ ಮುಖಂಡ ಶಿವ ಅಷ್ಟಗಿ ಆಡಳಿತ ಮಂಡಳಿಗೆ ಆಗ್ರಹಿಸಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದ ಮುಂಭಾಗದಲ್ಲಿ ಕಳೆದ 18 ದಿನಗಳಿಂದ ನೌಕರರ ಸಂಘ ನಡೆಸುತ್ತಿರುವ ಅನಿರ್ದಿಷ್ಟಾವಧಿ ಹೋರಾಟದ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿ ಕಳೆದ ಹಲವು ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ 281 ಹೊರಗುತ್ತಿಗೆ ಸಿಬ್ಬಂದಿಯನ್ನು ಏಪ್ರಿಲ್ 30 ರಂದು ಏಕಾಏಕಿ ಸೇವೆಯಿಂದ ಬಿಡುಗಡೆ ಮಾಡಿರುವ ಕ್ರಮವನ್ನು ಅವರು ತೀವ್ರವಾಗಿ ಖಂಡಿಸಿದರು.

ವಿಶ್ವವಿದ್ಯಾಲಯ ಆಡಳಿತ ಮಂಡಳಿಯ ಈ ತುಘಲಕ್ ನಿರ್ಧಾರ ಅವೈಜ್ಞಾನಿಕ ಮತ್ತು ಅಮಾನವೀಯ ನಡೆಯಾಗಿದೆ. ಆಡಳಿತ ಮಂಡಳಿ ಈ ಕ್ರಮದಿಂದ ಅನೇಕ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಹಲವು ವರ್ಷಗಳಿಂದ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿರುವ ನೌಕರರ ಬೇಡಿಕೆಗಳಿಗೆ ಮಾನವೀಯತೆ ಸ್ಪಂದನೆ ಇಲ್ಲದಂತಾಗಿದೆ.
ನೌಕರರ ತಾಳ್ಮೆ ಪರೀಕ್ಷಿಸದೆ ಗಂಭೀರವಾಗಿ ಪರಿಗಣಿಸಿ ಸಮಸ್ಯೆ ಸರಿಪಡಿಸಬೇಕು ಎಂದು ಒತ್ತಾಯಿಸಿದರು.
ಗುಲಬರ್ಗಾ ವಿಶ್ವವಿದ್ಯಾಲಯದ ಹೊರಗುತ್ತಿಗೆ ಸಿಬ್ಬಂದಿಗಳನ್ನು ಮತ್ತೆ ಕೆಲಸಕ್ಕೆ ನೇಮಕ ಮಾಡಿಕೊಳ್ಳಬೇಕು. ಇಲ್ಲವಾದರೆ
ಭಾರತೀಯ ಜನತಾ ಯುವ ಮೋರ್ಚಾ ವತಿಯಿಂದ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.




ಈ ಸಂದರ್ಭದಲ್ಲಿ ಬಿಜೆಪಿ ಯುವ ಮುಖಂಡರಾದ ಮಲ್ಲಿಕಾರ್ಜುನ್ ರಾಯಪ್ಪಗೌಡ, ನಿಜಗುಣ ಯಲಗೋಡ, ನೀಲಕಂಠ ಹಿರೇಮಠ್ ಹಾಗೂ ಹೊರಗುತ್ತಿಗೆ ನೌಕರ ಸಂಘದ ವಿಜಯ ಕುಮಾರ್ ಕೆಂಗಲ್, ಶೀಲ ಪ್ರಕಾಶ್ ದೊಡ್ಮನಿ, ಸವಿತಾ ಮಹೇಶ್ವರಿ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.
ನೌಕರರು ಕಳೆದ 18 ದಿನಗಳಿಂದ ಬಿಸಿಲು, ಮಳೆಯಲ್ಲಿ ಹೋರಾಟ ನಡೆಸುತ್ತಿದ್ದಾರೆ. ಅವರ ಈ ಪರಿಸ್ಥಿತಿಗೆ ಯಾರು ಹೊಣೆ? ಅವರ ಕುಟುಂಭ ಮತ್ತು ಮಕ್ಕಳ ಬದುಕಿನಲ್ಲಿ ವಿವಿ ಚೆಲ್ಲಾಟ ಆಡುತ್ತಿರುವುದು ಒಳ್ಳೆಯದಲ್ಲ

–ಶಿವ ಅಷ್ಟಗಿ
ಬಿಜೆಪಿ ಯುವ ನಾಯಕ
ಕಲಬುರಗಿ

# ಎಸ್ಸೆಸ್ಸೆಲ್ಸಿ ಮರುಮೌಲ್ಯಮಾಪನದಲ್ಲಿ ಭಾರ್ಗವಿ ಪ್ರಥಮ

**ಕರಜಗಿ :ಮೇ.18:**ಅಫಜಲಪುರ ತಾಲೂಕಿನ ಶೀರವಾಳ ಗ್ರಾಮದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಶ್ರೀ ವೀರ ಸಂಗಮೇಶ್ವರ ವಿದ್ಯಾಪೀಠ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ನಡೆಯುವ ಎನ್.ವಿ.ಜಿ ಪ್ರೌಢಶಾಲೆಯ ವಿದ್ಯಾರ್ಥಿನಿ ಭಾರ್ಗವಿ ಹಾಳಕಿ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ 625ಕ್ಕೆ 616 (ಶೇ.98.56) ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.ಈ ಮೊದಲು 625ಕ್ಕೆ 611 ಅಂಕಗಳನ್ನು ಪಡೆದಿದ್ದರಿಂದ ಮರು ಮೌಲ್ಯಮಾಪನ ಮಾಡಿಸಿದ್ದರಿಂದ ಈಗ 5 ಅಂಕಗಳು ಹೆಚ್ಚಾಗಿ ಬಂದಿವೆ.ವಿದ್ಯಾರ್ಥಿನಿಯ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಸಂಗಮೇಶ ಅಂಜುಟಗಿ,ಮುಖ್ಯ ಗುರುಗಳಾದ ಭಗವಂತ್ರಾಯ ಸಂಕೋಳಿ,ಬಿಲಾಲ್ ಚೌಧರಿ, ವಿಕಾಸ ಅಂಜುಟಗಿ,ಎಸ್.ಜಿ.ಪಾಟೀಲ್,ದೇವರಾಜ ಪವರ ಸೇರಿದಂತೆ ಸಿಬ್ಬಂದಿ ವರ್ಗದವರು ಸಂತಸ ವ್ಯಕ್ತಪಡಿಸಿದ್ದಾರೆ.



## ಅಕ್ರಮವಾಗಿ ಆಸ್ತಿ ಕಬಳಿಸುತ್ತಿರುವ ವಿಷ್ಣುವರ್ಧನ ವಾಲದೊಡ್ಡಿ ವಿರುದ್ಧ ಕೂಡಲೇ ಕ್ರಮ ಜರುಗಿಸಿ: ಕಾಶಿನಾಥ



**ಬೀದರ್:ಮೇ.18:** ವಾಲದೊಡ್ಡಿ ಗ್ರಾಮದಲ್ಲಿರುವ ಸ್ಮಶಾನ ಭೂಮಿ ಹಾಗೂ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿ ಇಡೀ ಗ್ರಾಮದ ಜನರಿಗೆ ದೌರ್ಜನ್ಯ ಎಸಗುತ್ತಿರುವ ಕರ್ನಾಟಕ ಭೀಮ ಸೇನೆ ರಾಜ್ಯ ಕಾರ್ಯಾಧ್ಯಕ್ಷ ವಿಷ್ಣುವರ್ಧನ ವಾಲದೊಡ್ಡಿ, ಅವರ ಸಹೋದರ ಹರ್ಷವರ್ಧನ ವಾಲದೊಡ್ಡಿ ಹಾಗೂ ಅವರ ತಂದೆ ಗುರಪ್ಪ ವಾಲದೊಡ್ಡಿ ಅವರ ವಿರೂದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಗಾದಗಿ ಮಾಜಿ ಗ್ರಾಮ ಸದಸ್ಯರಾದ ಕಾಶಿನಾಥ ಆಗ್ರಹಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಕಳೆದ ಐದು ವರ್ಷಗಳ ಹಿಂದೆ ತಾನು ಹರ್ಷವರ್ಧನ ವಾಲದೊಡ್ಡಿ ಅವರ ವಿರೂದ್ಧ ಸ್ಪರ್ಧಿಸಿ ಗಾದಗಿ ಗ್ರಾಮ ಪಂಚಾಯತ ಸದಸ್ಯನಾಗಿ ಆಯ್ಕೆಯಾದೆ. ಆಗಿನಿಂದ ನನ್ನ ಹಾಗೂ ನನ್ನ ಕುಟುಂಬದ ವಿರೂದ್ಧ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದ್ದರು. ಕೊನೆಗೆ ತನ್ನ ತಂಗಿ ಕಾಂಚನಾಗೆ ಸುಳ್ಳು ಹೇಳಿ ಮೋಸದಿಂದ ವರಿಸಿ 2017ರಲ್ಲಿ ವಿಷ್ಣುವರ್ಧನ ಮದುವೆಯಾದರು. ವಿಪರಿತ ಕಿರುಕುಳ ಕೊಟ್ಟ ಪರಿಣಾಮ 2022ರಲ್ಲಿ ನನ್ನ ತಂಗಿ ಸದ್ಯ ನಮ್ಮ ಮನೆಯಲ್ಲಿದ್ದಾಳೆ. ಹೀಗೆ ಇವರು ಸಂಬಂಧಿಕರೊಂದಿಗೆ ಜಗಳ, ಗ್ರಾಮದಲ್ಲಿ ಎಲ್ಲರೊಂದಿಗೆ ಕಿರಿಕಿರಿ ಮಾಡುವುದು ಇವರ ನಿತ್ಯದ ಚಾಳಿಯಾಗಿದೆ ಎಂದರು.

ಸಂಘಟನೆ ಹೆಸರು ಹೇಳಿಕೊಂಡು ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆ ಎಸಗುತ್ತಿರುವ ವಿಷ್ಣುವರ್ಧನ ಅವರ ವಿರೂದ್ಧ ಚೌಬಾರಾ ಪೊಲಿಸ್ ಠಾಣೆಯಲ್ಲಿ ಕಳೆದ 10 ತಿಂಗಳ ಹಿಂದೆ ದೂರು ದಾಖಲಿಸಿದಾಗ ಆಗಿನ ಪಿಎಸ್ಐ ತಸ್ಲಿಮಾ, ಸಿಪಿಐ ಹಿರೇಮಠ ಅವರು ಯಾವುದೇ ಕ್ರಮ ಕೈಗೊಂಡಿಲ್ಲ. ಈ ವಿಚಾರವಾಗಿ ನಮ್ಮ ತಂಗಿ ಮೇಲಾದ ಅನ್ಯಾಯದ ವಿರೂದ್ಧ ದೂರು ನೀಡಲು ಮಹಿಳಾ ಪೊಲಿಸ್ ಠಾಣೆಗೆ ದೂರು ದಾಖಲಿಸಲಾಗಿತ್ತು. ಅಲ್ಲಿಯೂ ನ್ಯಾಯ ಸಿಕ್ಕಿಲ್ಲ. ಪುನಃ ಜಿಲ್ಲಾ ಪೊಲಿಸ್ ವರಿಷ್ಠಾಧಿಕಾರಿಗಳಿಗಳಲ್ಲಿಗೆ ಹೋಗಿ ದೂರು ನೀಡಿದಾಗಲೂ ಕುಂಟು ನೆಪ ಹೇಳಿ ಚೌಬಾರಾ ಪೊಲಿಸರು ಸಹಕರಿಸಲಿಲ್ಲ ಎಂದು ತಮ್ಮ ಅಸಮಧಾನ ಹೊರ ಹಾಕಿದರು.

ನೊಂದ ಯುವತಿ ಕಾಂಚನಾ ಈ ಸಂದರ್ಭದಲ್ಲಿ ಮಾತನಾಡಿ, ನನ್ನನ್ನು ಮೋಸದಿಂದ ವಂಚಿಸಿ 2017ರಲ್ಲಿ ವಿಷ್ಣುವರ್ಧನ ಮದುವೆಯಾದರು. ನಿತ್ಯ ಹೊಡೆಯುವುದು, ಬಡಿಯುವುದು, ಹಿಂಸೆ ನೀಡುವುದು ಒಂದಲ್ಲ, ಎರಡಲ್ಲ ನಿತ್ಯ ಒದೆ ತನ್ನುವುದು ನನ್ನ ಕಾಯಕವಾಗಿ ಬಿಟ್ಟಿತ್ತು. ನಾನು ಕಾರ್ಮಿಕ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗಲೆ ಪುಸಲಾಯಿಸಿ ರಜಿಷ್ಟರ್ ಮದುವೆಯಾದರು. ಮೊದಲು ಮದುವೆಯಾಗಿತ್ತು. ಅದು ಡೈವರ್ಸ್ ಆಗಿದೆ ಎಂದು ಸುಳ್ಳು ಹೇಳಿ ಮೊಸದಿಂದ ವಿವಾಹವಾಗಿದ್ದರು. ನಾನು ಹಣ ಕೊಟ್ಟಾಗ ಸುಮ್ಮನಿರುವುದು ಇಲ್ಲವಾದಾಗ ಹಿಂಸೆ ನೀಡುವುದು ಅವರ ದೈನಂದಿನ ಚಾಳಿಯಾಗಿತ್ತು. ಅವರಿಗೆ ಬಟ್ಟೆ, ಬರೆ, ಕಾರು ಎಲ್ಲವನ್ನು ನನ್ನ ಸಂಬಳದಲ್ಲಿ ಕೊಡಿಸಿದ್ದರೂ ನನ್ನ ಪಾಲಿಗೆ ಬಂದಿದ್ದು ಬರೀ ಹಿಂಸೆ ಮಾತ್ರ. ಇದನ್ನು ತಾಳಲಾರದೆ 2022ರಲ್ಲಿ ತವರು ಮನೆಗೆ ಬಂದೆ. ಹೀಗೆ ಮೋಸ ಮಾಡಿ ನನ್ನ ಜೀವನ ಹಾಳು ಮಾಡಿ ನರ್ಕಮಯ ಮಾಡಿದ ವಿಷ್ಣುವರ್ಧನ ವಿರೂದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಕಾಂಚನಾ ಒತ್ತಾಯಿಸಿದರು.

ಗ್ರಾಮದ ಮತ್ತೋರ್ವ ಯುವಕ ಪ್ರವೀಣಕುಮಾರ ಮಾತನಾಡಿ, 1995ರಲ್ಲಿ ನಮ್ಮ ತಾಯಿ ವಿಜಯಲಕ್ಷ್ಮಿ ಅವರು ಗ್ರಾಮದಲ್ಲಿ ನಿವೇಶನ ಖರಿದಿಸಿ ಮನೆ ಕಟ್ಟಿದ್ದರು. ಅದು 2025ರಲ್ಲಿ ಇದ್ದಕ್ಕಿದ್ದಂತೆ ಬಿದ್ದು ಬಿಟ್ಟಿತ್ತು. ಪುನಃ ಅದನ್ನು ಕಟ್ಟಲು ಮುಂದಾದಾಗ ವಿಷ್ಣುವರ್ಧನ ಹಾಗೂ ಅವರ ಕುಟುಂಬಸ್ತರು ಬಂದು ತಡೆದು ನಮಗೆ ಕೊಲೆ ಬೆದರಿಕೆ ಹಾಕಿದರು. ಈ ವಿಚಾರವಾಗಿಯೂ ಚೌಬಾರಾ ಪೊಲಿಸ್ ಠಾಣೆಗೆ ದೂರು ದಾಖಲಿಸಿದರೂ ನಮಗೆ ಇಲ್ಲಿಯ ವರೆಗೆ ನ್ಯಾಯ ಸಿಕ್ಕಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು. ನಾಮದೇವ ಸಹ ವಿಷ್ಣುವರ್ಧನ ಕುಟುಂಬದ ವಿರೂದ್ಧ ತಮ್ಮ ಅಸಮಾಧಾನ ಹೊರ ಹಾಕಿದರು.

## ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳಕ್ಕೆ ಎಸ್‌ಯುಸಿಐ (ಸಿ) ಖಂಡನೆ



**ವಿಜಯಪುರ, ಮೇ. 18:** ಸರ್ಕಾರಿ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಲೀಟರಿಗೆ ತಲಾ ರೂ. 3ರಂತೆ ಏರಿಸಿರುವ ಕ್ರಮವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ. ಎಸ್. ಯು. ಸಿ. ಐ (ಸಿ) ಜಿಲ್ಲಾ ಕಾರ್ಯದರ್ಶಿ ಭಗವಾನ ರೆಡ್ಡಿ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಇಂಧನ ಬೆಲೆ ಏರಿಕೆಯು ಬೇರೆಲ್ಲ ಅವಶ್ಯಕ ವಸ್ತುಗಳನ್ನು ದುಬಾರಿಗೊಳಿಸಿ, ಹಣದುಬ್ಬರಕ್ಕೆ ಕಾರಣವಾಗುತ್ತಿದೆ. ಅಮೆರಿಕ ಇಸ್ರೇಲ್ ಕೂಟವು ಇರಾನ್ ಮೇಲೆ ನಡೆಸುತ್ತಿರುವ ಯುದ್ಧವೇ ಈ ಬೆಲೆ ಏರಿಕೆಗೆ ಕಾರಣ ಎಂದು ಕೇಂದ್ರ ಬಿಜೆಪಿ ಸರ್ಕಾರವು ಸಮರ್ಥಿಸಿಕೊಳ್ಳುತ್ತಿದೆ. ಆದರೆ ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುವ ಅವಕಾಶವನ್ನು ಅಮೆರಿಕದ ಒತ್ತಡಕ್ಕೆ ಮಣಿದು ಕೈಚೆಲ್ಲಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಅಲ್ಲದೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಅರ್ಧದಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳೇ ಇವೆ. ಹಾಗಾಗಿ ತಕ್ಷಣವೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು

ತೆರಿಗೆಗಳನ್ನು ಕಡಿತಗೊಳಿಸಬೇಕು. ತೈಲ ಕಂಪನಿಗಳ ಲಾಭಕ್ಕಾಗಿ, ದೇಶದೊಳಗೆಯೇ ಶುದ್ಧೀಕರಣ ಮಾಡಿ ಉತ್ಪಾದಿಸುವ ಪೆಟ್ರೋಲ್ ಮತ್ತು ಡಿಸೇಲಗಳಿಗೆ ಜಾಗತಿಕ ದರಗಳನ್ನು ನಿಗದಿ ಮಾಡುವ ನೀತಿಯನ್ನು ಕೈಬಿಡಬೇಕು. ಈ ಯುದ್ಧವನ್ನು ನಿಲ್ಲಿಸುವಂತೆ, ಬೇರೆ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸದಂತೆ ಅಮೆರಿಕದ ಸಾಮ್ರಾಜ್ಯಶಾಹಿಗಳ ಮೇಲೆ

ಭಾರತವು ಒತ್ತಡ ಹೇರಬೇಕು ಎಂದು ಅವರು ಒತ್ತಾಯಿಸಿದರು.

## ಒಳ ಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯ,ಉಗ್ರ ರೂಪದ ಹೋರಾಟಕ್ಕೆ ಸಿದ್ದರಾಗಿ: ಸಂಸದ ಗೋವಿಂದ ಕಾರಜೋಳ ಕರೆ



**ಕಮಲಾಪೂರ: ಮೇ.18:** ಭಾರತ ದೇಶಕ್ಕೆ ಸಂವಿಧಾನ ನೀಡಿದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನವನ್ನು ನೀಡಿ ದಲಿತರಿಗೆ 10 ವರ್ಷ ಮೀಸಲಾತಿ ಅವಕಾಶ ನೀಡಿದ್ದರು. ಆ ಮೀಸಲಾತಿಯನ್ನು ನಿರಂತರವಾಗಿ ಮುಂದುವರಿಸುವಲ್ಲಿ ಹಸಿರು ಕ್ರಾಂತಿಯ ಪಿತಾಮಹ ಡಾ. ಜಗಜೀವನ್ ರಾವ್ ಅವರ ಪರಿಶ್ರಮ ಸಾಕಷ್ಟಿದೆ. ಒಳಮೀಸಲಾತಿಯಲ್ಲಿ ಮಾದಿಗ ಸಮುದಾಯ ಮತ್ತು ಅದರ ಒಳ ಪಂಗಡಗಳಿಗೆ ಅನ್ಯಾಯವಾಗಿದೆ. ನ್ಯಾಯ ಸಿಗಬೇಕೆಂದರೆ ಹೋರಾಟ ಅನಿವಾರ್ಯವಾಗಿದೆ.

ಒಳ ಮೀಸಲಾತಿಗಾಗಿ ಸಮಾಜದ ಮುಖಂಡರು ಉಗ್ರರೂಪದ ಹೋರಾಟಕ್ಕೆ ಸಿದ್ದರಾಗಿ ಎಂದು ಸಂಸದ ಗೋವಿಂದ ಕಾರಜೋಳ ಕರೆ ನೀಡಿದರು.

ತಾಲೂಕಿನ ಆಕೃತಿ ಕಲ್ಯಾಣ ಮಂಟಪದಲ್ಲಿ ದಿ. ಜಿ. ರಾಮಕೃಷ್ಣ ಅವರ ವೇದಿಕೆಯಲ್ಲಿ ಭಾನುವಾರ ತಾಲೂಕು ಜಯಂತ್ಯೋತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡ ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ 119ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ನಾನು ಬುದ್ಧ,ಬಸವ,ಅಂಬೇಡ್ಕರ ತತ್ವದಲ್ಲಿ ನಂಬಿಕೆ ಹೊಂದಿದವನು ಸರ್ವರಿಗೂ ಸಮಬಾಳು ಸಮಪಾಲು ತತ್ವದ ಅಡಿಯಲ್ಲಿ ನಂಬಿಕೆ ಇಟ್ಟವನು ನಾವು ಯಾರ ಹಕ್ಕು ಕಸಿಯುತ್ತಿಲ್ಲ ಸಂವಿಧಾನ ಬದ್ಧ ಹಕ್ಕು ಕೇಳುತ್ತಿದ್ದೇವೆ ಎಂದರು.

ನಂತರ ಕೆಪಿಸಿಸಿ ಸದಸ್ಯ ವಿಜಯಕುಮಾರ ರಾಮಕೃಷ್ಣ ಮಾತನಾಡಿ, ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ದಿ ಪರ ಮನೋಭಾವ ಬೆಳೆಸಿಕೊಳ್ಳೋಣ.ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ಧಿ ಪರ ಮನೋಭಾವ ಬೆಳೆಸಿಕೊಳ್ಳೋಣ. ಸ್ಥಳೀಯವಾಗಿ ದಿವಂಗತ ಜಿ ರಾಮಕೃಷ್ಣ ಅವರ ಅವಧಿಯಲ್ಲಿ ಹಲವಾರು ಬಗೆಯ ಅಭಿವೃದ್ಧಿ ಕಾಮಗಾರಿಗಳು ಮಾಡಿದ್ದು ಸ್ಮರಿಸುತ್ತೇನೆ. ನನಗೆ ಟಿಕೆಟ್ ನೀಡದಿದ್ದರೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದೇನೆ ಎಂದರು.

ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ರಾಜ್ಯಾಧ್ಯಕ್ಷ ರವಿ ಬಿರಾದಾರ, ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿನಾಥ ಪಾಟೀಲ್ ಮಾತನಾಡಿದರು.

ಈ ಸಂದರ್ಭದಲ್ಲಿ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ವಿಠಲ ಕಾಂಬ್ಳೆ ಅಧ್ಯಕ್ಷತೆ ವಹಿಸಿದ್ದರು. ನಿರಗುಡಿ ಶ್ರೀ ಹವಾ ಮಲ್ಲಿನಾಥ ಮುತ್ಯಾ, ಪ್ರಮುಖರಾದ ಶಿವಶೆಟ್ಟಿ ಪಾಟೀಲ, ಅನೀಲಕುಮಾರ ಬೆಳಕೇರಿ,ಲಿಂಗರಾಜ ತಾರಫೈಲ, ರಾಜು ವಾಡೇಕರ,ಸಿ.ಎ.ಪಾಟೀಲ,ಶ್ಯಾಮ ನಾಟೀಕಾರ, ಗುರುಪಾದಪ್ಪ ಮಾಟೂರ,ತಾಜೋದ್ದಿನ ಪಟೇಲ್, ಅಬ್ದುಲ ಸತ್ತಾರ, ಶಿವಕುಮಾರ ದೊಶೆಟ್ಟಿ, ಸುಖಾನಂದ ಸಿಂಗೆ, ಮಂಜುನಾಥ ನಾಲವಾರಕರ,ದಶರಥ ಕಲಗುರ್ತಿ, ಪ್ರದೀಪ ಭಾವೆ,ನಿಂಗಪ್ಪ ಪ್ರಬುದ್ದಕರ,ಹಣಮಂತ ಹೊಸಮನಿ, ಹಣಮಂತ ಕಟ್ಟಿಮನಿ,ಅರುಣ ದಮ್ಮೂರ, ಅಶೋಕ ಸಿಂಗೆ,ಮನೋಹರ ಚಕ್ರಕರ್,ನಿಜಪ್ಪ ಮಡಕಿ, ಶಿವರಾಜ ಮೂಕಿ, ರಾಜು ಭೂಂಯಾರ,ಪಂಡಿತ ಸಿಂಗೆ, ವಿಶ್ವ,ಜೈರಾಜ ಕಿಣಗಿಕರ್,ಆನಂದ ಕಪನೂರ ಮತ್ತಿತರರಿದ್ದರು. ಡಾ. ಚಂದ್ರಕಾಂತ ಸ್ವಾಗತಿಸಿದರು. ಡಾ.ಗೀತಾಂಜಲಿ ನಿರೂಪಿಸಿದರು.

ಡಾ.ಬಾಬು ಜಗಜೀವನ್ ರಾವ್ ಅವರು ದೇಶದ ಆಡಳಿತದಲ್ಲಿ ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲೇ ನಾವೆಲ್ಲರೂ ಶ್ರಮಿಸೋಣ. ಜಯಂತ್ಯುತ್ಸವ ಹೆಸರಲ್ಲಿ ಸಮಾಜವನ್ನು ಎರಡು ಬಣ್ಣಗಳಾಗಿ ಒಡೆಯದೆ ಎಲ್ಲರೂ ಒಗ್ಗಟ್ಟಾಗಿ ಜಯಂತಿ ಆಚರಿಸಬೇಕು.

। ಬಸವರಾಜ್ ಮತ್ತಿಮಡು ಮಾತ್ತಿಮಡು, ಶಾಸಕ

ಡಾ.ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ದಿ ಪರ ಮನೋಭಾವ ಬೆಳೆಸಿಕೊಳ್ಳೋಣ.ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ಧಿ ಪರ ಮನೋಭಾವ ಬೆಳೆಸಿಕೊಳ್ಳೋಣ. ಸ್ಥಳೀಯವಾಗಿ ದಿವಂಗತ ಜಿ ರಾಮಕೃಷ್ಣ ಅವರ ಅವಧಿಯಲ್ಲಿ ಹಲವಾರು ಬಗೆಯ ಅಭಿವೃದ್ಧಿ ಕಾಮಗಾರಿಗಳು ಮಾಡಿದ್ದು ಸ್ಮರಿಸುತ್ತೇನೆ. ನನಗೆ ಟಿಕೆಟ್ ನೀಡದಿದ್ದರೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದೇನೆ ಎಂದರು.

। ವಿಜಯಕುಮಾರ ಜಿ ರಾಮಕೃಷ್ಣ , ಕೆಪಿಸಿಸಿ ಸದಸ್ಯ

ಡಾ. ಬಾಬುಜಗಜೀವನರಾಮ್ ಅವರು ನಡೆದು ಬಂದ ದಾರಿ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ, ಡಾ. ಬಾಬು ಜಗಜೀವನರಾಂ ಅವರು ಪ್ರಬುದ್ಧ ರಾಜನೀತಿಜ್ಞ ಆಗಿದ್ದರು ಜೊತೆಗೆ ಅವರು ಬದುಕು ಆದರ್ಶ. ಅವರ ಜೀವನವೇ ನಮಗೆಲ್ಲ ದಾರಿ ದೀಪವಾಗಿದೆ ಎಂದರು.

ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ. ಶೋಷಿತರು, ಹಿಂದುಳಿದವರು ಭವಿಷ್ಯದ ಭರವಸೆ ಇಟ್ಟುಕೊಂಡು ಬದುಕಬೇಕು. ಮಾನವೀಯತೆ ನಮ್ಮನ್ನು ಬದುಕಿಸುತ್ತದೆ ಎಂದರು.ಡಾ.ಬಾಬುಜಗಜೀವನರಾವ್ ಅವರು ಈ ದೇಶದ ಆಹಾರ ಸಚಿವರಾಗಿ, ಭಾರತದ ಜನತೆಗೆ ಹಸಿರು ಕ್ರಾಂತಿ ಯೋಜನೆ ಜಾರಿಗೊಳಿಸುವ ಮೂಲಕ ಈ ದೇಶದ ಜನತೆ ಹಸಿವಿನಿಂದ ಬಳಲದಂತೆ ನೋಡಿಕೊಂಡ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

। ಅನೀಲಕುಮಾರ ಬೆಳಕೇರಿ
ಮಾದಿಗ ಸಮಾಜದ ಮುಖಂಡರು

## ಬುದ್ಧ, ಬಸವ, ಅಂಬೇಡ್ಕರ್ ತತ್ವಗಳು ಸಮಾಜಕ್ಕೆ ದಾರಿದೀಪ: ಪೂಜ್ಯ ಜ್ಞಾನ ಪ್ರಕಾಶ ಸ್ವಾಮಿಜೀ



**ಕಲಬುರಗಿ: ಮೇ.18:** ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರು ಮಾನವ ಸಮಾಜಕ್ಕೆ ನೀಡಿದ ಸಮಾನತೆ, ಶಿಕ್ಷಣ ಮತ್ತು ಮಾನವೀಯತೆಯ ಸಂದೇಶಗಳು ಇಂದಿಗೂ ಪ್ರಸ್ತುತವಾಗಿದ್ದು, ಯುವಜನತೆ ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮೈಸೂರಿನ ಉರಿಲಿಂಗಿ ಪೆದ್ದಿಮಠದ ಪೂಜ್ಯ ಶ್ರೀ ಜ್ಞಾನ ಪ್ರಕಾಶ ಸ್ವಾಮಿಜೀ ಹೇಳಿದರು. ನಗರದ ಎಂ.ಎಸ್.ಕೆ. ಮಿಲ್ ಜಿ.ಡಿ.ಎ. ವಸತಿಗೃಹ ಬಡಾವಣೆಯ ಉದ್ಯಾನವನದಲ್ಲಿ, ಸಿ.ಐ.ಬಿ. ಕಾಲೋನಿ ಹತ್ತಿರ ಭಾನುವಾರ ಹಮ್ಮಿಕೊಂಡಿದ್ದ ಬುದ್ಧ, ಬಸವ ಹಾಗೂ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಬುದ್ಧನು ಶಾಂತಿ ಮತ್ತು ಕರುಣೆಯ ಮಾರ್ಗ ತೋರಿದರೆ, ಬಸವಣ್ಣ ಸಮಾನತೆಯ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಡಾ. ಅಂಬೇಡ್ಕರ್ ಶಿಕ್ಷಣದ ಮೂಲಕ ಶೋಷಿತ ಸಮುದಾಯಗಳಿಗೆ ಹಕ್ಕು ಮತ್ತು ಗೌರವ ತಂದುಕೊಟ್ಟ ಮಹಾನ್ ನಾಯಕರು. ಅವರ ತತ್ವಗಳನ್ನು ಪಾಲಿಸುವ ಮೂಲಕ ಮಾತ್ರ ಸಮಾನತೆಯ ಭಾರತ ನಿರ್ಮಾಣ ಸಾಧ್ಯ ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್, ಬುದ್ಧ, ಬಸವ ಹಾಗೂ ಬಾಬಾಸಾಹೇಬ್ ಅಂಬೇಡ್ಕರ್ ಅವರು ನೀಡಿದ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಸಂದೇಶಗಳು ಇಂದಿನ ಸಮಾಜಕ್ಕೆ ಅತ್ಯಂತ ಅಗತ್ಯವಾಗಿವೆ ಎಂದು ಹೇಳಿದರು. ಸಮಾಜದಲ್ಲಿ ಸಮಾನತೆ, ಸಹೋದರತ್ವ ಮತ್ತು ಮಾನವೀಯ ಮೌಲ್ಯಗಳನ್ನು ಬಲಪಡಿಸುವಲ್ಲಿ ಈ ಮಹನೀಯರ ಕೊಡುಗೆ ಅಪಾರವಾಗಿದೆ. ಶೋಷಿತರು ಮತ್ತು ಹಿಂದುಳಿದ ವರ್ಗಗಳ ಏಳಿಗೆಗಾಗಿ ಅವರು ನಡೆಸಿದ ಹೋರಾಟ ಇಂದಿಗೂ ಪ್ರೇರಣೆಯಾಗಿದೆ ಎಂದು ತಿಳಿಸಿದರು.

ಇಂದಿನ ಯುವಜನತೆ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಶಿಕ್ಷಣದ ಮೂಲಕವೇ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ಸಾಧ್ಯ. ಸಂಘಟಿತ ಹೋರಾಟದಿಂದ ಮಾತ್ರ ಸಮಾಜದ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಲುಂಬಿನಿ ಬುದ್ಧವಿಹಾರದ ಪೂಜ್ಯ ಭಂತೆ ನಾಗರತ್ನ ಅವರು ಭಾಗವಹಿಸಿದ್ದರು. ರಾಯಚೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಕೆ. ವೆಂಕಟೇಶ ವಿಶೇಷ ಉಪನ್ಯಾಸ ನೀಡಿದರು.

ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷ ವೈಜನಾಥ ಭಾವಿಕಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮಲ್ಲಿಕಾರ್ಜುನ ಮದಾನಿ ಪ್ರಸ್ತಾವಿಕವಾಗಿ ಮಾತನಾಡಿದರು. ಡಾ. ಮಾರುತಿ ಬೇಂದ್ರೆ ಕಾರ್ಯಕ್ರಮ ನಿರೂಪಿಸಿದರು. ದಶರಥ ವಂದನಾರ್ಪಣೆ ಸಲ್ಲಿಸಿದರು.

ಎಂ.ಎಸ್.ಕೆ. ಮಿಲ್ ಜಿ.ಡಿ.ಎ. ವಸತಿಗೃಹ ಬಡಾವಣೆಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಕಾರ್ಯಕ್ರಮದ ವ್ಯವಸ್ಥೆ ನಿರ್ವಹಿಸಿದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE